ದಿನಾಂಕ 16-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯವರ ಪರವಾಗಿ ವಿ.ಎಂ.ಎಸ್.ಯು ವಕೀಲರವರಿಂದಃ**

ಸ್ಥಿರಾಸ್ತಿಗಳ ಕಂದಾಯ ದಾಖಲೆಗಳು ಮಾಲೀಕರ ಹೆಸರಿನಲ್ಲಿ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳ ಆರ್ ಟಿಸಿ ನನ್ನ ತಂದೆಯ ಹೆಸರಿನಲ್ಲಾಗಲೇ ಅವರ ಹಿರಿಯರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. ಈಗಲೂ ಸಹ ದಾವಾ ಆಸ್ತಿಯ ಆರ್ ಟಸಿ ಸಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. 2012-2013 ರಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. 2012 -2013 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದ ಆರ್ ಟಿಸಿಯನ್ನು ನಾವು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಕಂದಾಯ ದಾಖಲೆಗಳು ಮತ್ತು ಆರ್ ಟಿ ಸಿಗಳು ನೋಂದಾಯತಿ ದಾಖಲೆಗಳ ಆದಾರದ ಮೇಲೆ ಹಕ್ಕು ಬದಲಾವಣೆ ಆಗುತ್ತದೆ ಎಂದರೆ ಕಾನೂನಾತ್ಮಕವಾಗಿ ಆಗುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ನನಗಾಗಲಿ ಅಥವಾ ನನ್ನ ಹಿರಿಯರಿಗಾಗಲೀ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ನನ್ನ ತಂದೆಯ ಅಥವಾ ನನ್ನ ಹೆಸರಿಗಾಗಲಿ ಖಾತೆ ಬದಲಾವಣೆಗೆ ಮಾಡಲು ಹೋಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಇದ್ದ ಕಟ್ಟಡ ಕೆಡವುವವರೆಗೆ ಪ್ರತಿವಾದಿಗಳ ಸ್ವದೀನದಲ್ಲಿ ಇತ್ತು ಎಂದರೆ ನನ್ನ ಸ್ವದೀನದಲ್ಲಿ ಇತ್ತು ಎಂದು ನುಡಿಯುತ್ತಾರೆ. ಹೈವೇ ಅಧಿಕಾರಿಗಳು ದಾವಾ ಆಸ್ತಿಯ ಸಂಬದ 1 ನೇ ಪ್ರತಿವಾದಿಯಿಂದ ಅನುಮತಿ ತೆಗೆದುಕೊಂಡಿದ್ದಾರೆ ನನ್ನಿಂದ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಕಟ್ಟಡ ಕೆಡವುವವರಗೆ ರಾ.ಹೆದ್ದಾರಿ ಅಧಿಕಾರಿಗಳು ನಮ್ಮನ್ನು ಸಂಪರ್ಕಿಸಿಲ್ಲ ಎಂದರೆ ಸರಿಯಲ್ಲ. ಕಟ್ಟಡ ಕೆಡವುವವರು ನಮ್ಮನ್ನು ಸಂಪರ್ಕಿಸಿರುತ್ತಾರಾ ಎಂದರೆ ಅವರು ನಮ್ಮನ್ನು ಸಂಪರ್ಕಿಸಿಲ್ಲ ನಾವೇ ಅವರನ್ನು ಸಂಪರ್ಕಿಸಿರುತ್ತೇವೆ. ಸಾಕ್ಷಿದಾರರು ಮುಂದುವರಿದು ನಾವು ರಾ. ಹೆದ್ದಾರಿ

ಅಧಿಕಾರಿಗಳನ್ನು ಸಂಪರ್ಕಿಸಿದ್ದು ಅವರು ನಮಗೆ ಹೇಳುವುದೇನೆಂದರೆ ಆರ್ ಟಿ ಸಿ ಯಾರ ಹೆಸರಿನಲ್ಲಿ ಇರುತ್ತದೆ ಅವರಿಗೆ ನಾವು ನೋಟೀಸು ಕಳುಹಿಸುತ್ತೇವೆ ಎಂದು ಹೇಳುತ್ತಾರೆ.

ನಾನು ಹಾಜರು ಮಾಡಿದ ನಿಪಿ 10- ನಕ್ಷೆ ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಹಾಜರು ಮಾಡಿದ ನಕಾಶೆಗೂ ದಾವಾ ಆಸ್ತಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ನಕಾಶೆ ದಾವಾ ಆಸ್ತಿಗೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ದಾರಿ ತಪ್ಪಿಸಲು ಸುಳ್ಳು ನಕಾಶೆ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ರಾ. ಹೆದ್ದಾರಿಯವರು ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಾರೆ ಎಂದು 2018-2019 ರಲ್ಲಿ ಪ್ರಥಮವಾಗಿ ನನಗೆ ತಿಳಿಯಿತು. ರಸ್ತೆ ಅಗಲೀಕರಣದಲ್ಲಿ ನಮ್ಮ ಆಸ್ತಿ ಹೋಗುತ್ತದೆ ಎಂದು ನನಗೆ ಮಾಹಿತಿ ಇತ್ತು.ನಮ್ಮ ಆಸ್ತಿ ಸಂಬಂದವಾಗಿ ರಾ. ಹೆದ್ದಾರಿ ಅಧಿಕಾರಿಗಳನ್ನು ನಾನು ವೈಯಕ್ತಿವಾಗಿ ಪ್ರಥಮವಾಗಿ 2018 ರಲ್ಲಿ ಬೇಟಿಯಾಗಿರುತ್ತೇನೆ. 2019 ರಲ್ಲಿ ಲಿಖಿತ ಪತ್ರವನ್ನು ಬರೆದೆ, ತದನಂತರ ಸದ್ರಿ ಕಚೇರಿಯಲ್ಲಿ ನನ್ನ ಸಂಪರ್ಕ ಇತ್ತು. 2013 ರಲ್ಲಿ ಹಿರಿಯಣ್ಣ ಶೆಟ್ಟಿಗಾರ್ ಅವರ ಪರಿಚಯವಾಯಿತು. ನಾನು ಬೆಂಗಳೂರಿನಲ್ಲಿ ವಾಸ ಮಾಡಲು 1997 ರಲ್ಲಿ ಪ್ರಾರಂಭಿಸಿದೆ. ಹೈವೇ ಅಧಿಕಾರಿಗಳಿಗೆ ಆಸ್ತಿಯಲ್ಲಿ ನನಗೆ ಹಕ್ಕು ಇದೆ ಎಂದು ದಾಖಲೆ ನೀಡಿದೆ ಅದಕ್ಕೆ ಅವರು ಕಾಂಪನ್ಸೇಷನ್ ಬ್ಲಾಕ್ ಮಾಡಿದರು. ದಾವಾ ಆಸ್ತಿಗಳ ಮನೆಯ ಬಗ್ಗೆ ರಾ. ಹೆದ್ದಾರಿ ಕಚೇರಿಗೆ ನೀಡಿರುತ್ತೇನೆ. ಆದರೆ ಹೈವೇ ಅಧಿಕಾರಿಗಳನ್ನು ನಾನು ನೀಡಿದ ದಾಖಲೆಗಳನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನಮ್ಮ ದಾಖಲೆ ಸರಿ ಇದ್ದರೆ ನನಗೆ ಬಿಲ್ಡಿಂಗ್ ಕೆಡವುವ ಮುಂಚೆ ನೋಟೀಸು ಬರುತ್ತಿತ್ತು ಎಂದರೆ ಸರಿ.

ದಾಖಲೆ ಸರಿ ಇರಲಿಲ್ಲ ಅದಕ್ಕೆ ನನಗೆ ನೋಟೀಸು ಬರಲಿಲ್ಲ ಎಂದರೆ ಸರಿಯಲ್ಲ. 2018 ರಲ್ಲಿ ನನಗೆ ಗೊತ್ತಾದರೂ ಸಹ ನಾನು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಯಾವಗ ಕಾಂಪನ್ಸೇಷನ್ ಅಮೌಂಟ್ ರೇವಣಿ ಯಾಯಿತು ಆವಾಗ ನಾನು ಈ ವಿಷಯವನ್ನು ತೆಗೆದಿದ್ದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ನನಗೆ ಆಸ್ತಿಯಲ್ಲಿ 2/3 ಭಾಗ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಾಗಲೀ , ಅದರ ಕಟ್ಟದಲ್ಲಿ ಆಗಲಿ ಎಂದಿಗೂ ನನ್ನ ಸ್ವಾದೀನ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವ ಆಧಾರದ ಮೇಲೆ ತಮ್ಮ ಹೆಸರುನ್ನು ಪಹಣಿ ಪತ್ರಿಕೆಯಲ್ಲಿ ಸೇರಿಸಿರುತ್ತಾರೆ ಎಂದರೆ

ದಾನ ಪತ್ರದ ಅನುಸಾರವಾಗಿ ಅವರ ಹೆಸರನ್ನು ಆರ್ಟಿಸಿಯಲ್ಲಿ ಸೇರಿಸಿರುತ್ತಾರೆ ಎಂದು ಮಾಹಿತಿ ಬಂದಿರುತ್ತದೆ. ದಾನ ಪತ್ರದಲ್ಲಿ ಯಾವ ರೀತಿಯಲ್ಲಿ ಹಕ್ಕು ಬಂದಿತ್ತು ಎಂದು ಸದ್ರಿ ದಾಖಲೆಯಲ್ಲಿ ಉಲ್ಲೇಖ ಇತ್ತು ಎಂದರೆ ಸರಿ. ಧರ್ಮ ಸಾಧನದಲ್ಲಿ ದಾನ ಕೊಟ್ಟವರಿಗೆ ಹೇಗೆ ಆಸ್ತಿ ಬಂತು ಎಂದು ದಾನ ಪತ್ರದ ಜೊತೆಗೆ ಒಂದು ದಾಖಲೆ ಇದ್ದು ಅದರ ಸತ್ಯಾಸ್ಯತ್ತತೆಯ ಬಗ್ಗೆ ತಿಳಿಯಲು ಪ್ರಯತ್ನ ಮಾಡಿದ್ದೀರಾ ಎಂದರೆ ತಿಳಿಯಲು ಪ್ರಯತ್ನ ಪಡಲಿಲ್ಲ. ದಾನ ಕೊಟ್ಟವರಿಗೆ ದಾವಾ ಆಸ್ತಿ 19-11-1942 ಅವರ ಕುಟುಂಬ ಕರಾರು ಆಗುವ ಸಮಯದಲ್ಲಿ ಹಕ್ಕು ಬಂದಿತ್ತು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ದಾನ ಪತ್ರದ ಅನುಸಾರವಾಗಿ ದಾವಾ ಆಸ್ತಿಗೆ ಸಂಪೂರ್ಣ ಹಕ್ಕು ಮತ್ತು ಸ್ವಾದೀನ ಹೊಂದಿದವರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ 1 ನೇ ಪ್ರತಿವಾದಿಗೆ ಇರುವ ಹಕ್ಕನ್ನು ಪ್ರಶ್ನಿಸಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ತಾಗಿ ನನಗೆ ಹಿಂದುಗಡೆ ಆಸ್ತಿ ಇದೆ. ದಾವಾ ಆಸ್ತಿಯಲ್ಲಿ 6-50 ಮನೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ಕಟ್ಟಿದ ಕಟ್ಟಡ ಇತ್ತು ಎಂದರೆ ಸರಿಯಲ್ಲ.

2020 ರಲ್ಲಿ ದಾವಾ ಆಸ್ತಿಗಳ ಮೌಲ್ಯ ತಿಳಿದುಕೊಳ್ಳವ ಅವಶ್ಯಕತೆ ಎಂದಿಗೂ ಬರಲಿಲ್ಲ. 2020 ರಲ್ಲಿ ದಾವಾ ಆಸ್ತಿಯ ಮೌಲ್ಯ 100 ಸೆಂಟ್ಸಗೆ 3 ಲಕ್ಷಕ್ಕಿಂತಲೂ ಹೆಚ್ಚು ಇತ್ತು ಎಂದರೆ ಇರಬಹುದು. ದಾವಾ ಹಾಕಲು ವಕೀಲರಿಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ನನ್ನ ದಾಖಲೆಗಳ ಆಧಾರದ ಮೇಲೆ ನಾನಾಗಲೀ ನನ್ನ ಹಿರಿಯರಾಗಲೀ ಎಂದು ಅನುಭವಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿತ ರಾ. ಹೆದ್ದಾರಿಯರು ನೀಡುವ ಹಣವನ್ನು ಪಡೆದುಕೊಳ್ಳುವ ಸಲುವಾಗಿ ದುರುದ್ದೇಶದಿಂದ ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದಿಯರ ವಿರುದ್ಧ ಯಾವುದೇ ಪರಿಹಾರ ಪಡಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.